2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**ಎಸ್.ಸಿ.5027/2022**

ದಿಃ19.03.2025
ಚಾಸಾ-10 ಪ್ರಾಸಾ-8

| | |
|---|---|
| ಹೆಸರು | : ಶಿವಪ್ಪ |
| ತಂದೆಯ ಹೆಸರು | : ಚೂಡಮಾದಯ್ಯ |
| ವಯಸ್ಸು | : 36 |
| ಉದ್ಯೋಗ | : ವ್ಯವಸಾಯ |
| ವಾಸ | : ನಲ್ಲಹಳ್ಳಿ |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಸಾಕ್ಷಿಯು ದಿಃ26.05.2020ರ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4, 4(ಎ) ಎಂದು ಗುರುತಿಸಲಾಯಿತು.

ದಿಃ26.05.2020ರಂದು ಸಾತನೂರು-ಮಳವಳ್ಳಿಗೆ ಹೋಗುವ ಮುಖ್ಯರಸ್ತೆಯಲ್ಲಿರುವ ಆರೋಪಿತರ ಮನೆಯ ಮುಂಭಾಗದಲ್ಲಿ ಪೊಲೀಸರ ಸೂಚನೆ ಮೇರೆಗೆ ನಿಪಿ-4ಕ್ಕೆ ಸಹಿ ಮಾಡಿರುತ್ತೇನೆ. ಚಾಸಾ-1ರವರು ಗಲಾಟೆಗೆ ಸಂಬಂಧಪಟ್ಟಂತೆ ದೂರನ್ನು ನೀಡಿದ್ದು, ತತ್ಸಂಬಂಧ ಪೊಲೀಸರು ಮಹಜರನ್ನು ಜರುಗಿಸಿರುತ್ತಾರೆ. ನಾನು ನಿಪಿ-4ರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸುಮಾರು 4-00 ರಿಂದ 5-00 ಗಂಟೆ ಸಮಯದಲ್ಲಿ ಪೊಲೀಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಿಪಿ-4ಕ್ಕೆ ನನ್ನ ಜೊತೆ ಚಾಸಾ-9 ಮತ್ತು 11ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ದಿಃ26.05.2020ರ ಜಪ್ತು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-5, 5(ಎ) ಎಂದು ಗುರುತಿಸಲಾಯಿತು.

ದಿಃ26.05.2020ರಂದು ಕಾಳೀರೇಗೌಡನದೊಡ್ಡಿ ಗ್ರಾಮದ ಬಳಿ ಇರುವ ಸೇತುವೆ ಬಳಿ ನಿಪಿ-5ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರು 4ನೇ ಆರೋಪಿ ನೀಡಿದ ಮಾಹಿತಿ ಮೇರೆಗೆ ನನ್ನನ್ನು ಹಾಗೂ ಚಾಸಾ-9 ಮತ್ತು 11ರವರನ್ನು ಸೇತುವೆ ಬಳಿ ಕರೆದುಕೊಂಡು ಹೋಗಿ ಸಂಜೆ 5-00 ರಿಂದ 6-00 ಗಂಟೆ ಸಮಯದಲ್ಲಿ ನನ್ನ ಹಾಗೂ ಚಾಸಾ-9 ಮತ್ತು 11ರವರ ಸಮಕ್ಷಮ ಒಂದು ಸ್ಟೀಲ್ ಚಾಕು, ಒಂದು ಕಬ್ಬಿಣದ ರಾಡು ಹಾಗೂ ಒಂದು ಕಲ್ಲನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಸ್ಟೀಲ್ ಚಾಕು, ಒಂದು ಕಬ್ಬಿಣದ ರಾಡು ಹಾಗೂ ಒಂದು ಕಲ್ಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-5 ರಿಂದ 7 ಎಂದು ಗುರುತಿಸಲಾಗಿರುತ್ತದೆ. 4ನೇ ಆರೋಪಿಯು ಪೊಲೀಸರಿಗೆ ಎಂಒ-5 ರಿಂದ 7ನ್ನು ಹಾಜರುಪಡಿಸಿದಂತೆ ಅವುಗಳನ್ನು ನಿಪಿ-5ರಂತೆ ಅಮಾನತುಪಡಿಸಿಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನಾನು ನಿಪಿ-4ಕ್ಕೆ ಚಾಸಾ-1ರವರ ಮನೆಯ ಬಳಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಂ.ಎಂ, ಆರೋಪಿತರ ಪರ ವಕೀಲರಿಂದ**

ನಮ್ಮ ಗ್ರಾಮದಿಂದ ಪಟೇಲ್ ಕಾಳೀರೇಗೌಡನದೊಡ್ಡಿ ಗ್ರಾಮಕ್ಕೆ ಎಷ್ಟು ದೂರವಾಗುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ದಿಃ26.05.2020ರಂದು ಕಬ್ಬಾಳು ಗ್ರಾಮದಲ್ಲಿ ಊಟದ ಕಾರ್ಯಕ್ರಮ ಇದ್ದುದರಿಂದ ನಾನು ಕಬ್ಬಾಳು ಗ್ರಾಮಕ್ಕೆ ಹೋಗಿರುತ್ತೇನೆ. ನಾನು ಊಟ ಮುಗಿಸಿಕೊಂಡು 2-00 ಗಂಟೆಗೆ ವಾಪಸ್ ಬರುತ್ತಿರುವಾಗ ಪೊಲೀಸರು ಫೋನ್ ಮಾಡಿ ಪಂಚರಾಗಿ ಬರಲು ಕೇಳಿಕೊಂಡಿರುತ್ತಾರೆ. ನಾನು ನಲ್ಲಹಳ್ಳಿ ಗ್ರಾಮದಲ್ಲಿರುವಾಗಲೇ ಪೊಲೀಸರು ನನಗೆ ಪಂಚರಾಗಿ ಬರಲು ಫೋನ್ ಮೂಲಕ ಮಾಹಿತಿ ನೀಡಿದ್ದರು. ನಾನು

ಕನಕಪುರ ಮೂಲಕ ಕಬ್ಬಾಳು ಗ್ರಾಮಕ್ಕೆ ಹೋಗಿರುತ್ತೇನೆ. ನಾನು ಬೆಳಗ್ಗೆ 10-00 ಗಂಟೆಗೆ ನಲ್ಲಹಳ್ಳಿಯನ್ನು ಬಿಟ್ಟಿರುತ್ತೇನೆ. ನನ್ನ ಜೊತೆ ಚಾಸಾ-9 ಮತ್ತು 11ರವರು ಇದ್ದರು. ನನಗೆ ಸೇರಿದ ಕಾರಿನ ಮೂಲಕ ನಲ್ಲಹಳ್ಳಿ ಗ್ರಾಮದಿಂದ ಕನಕಪುರಕ್ಕೆ ಬೆಳಗ್ಗೆ 11-00 ರಿಂದ 11-15 ಗಂಟೆಗೆ ಬಂದಿರುತ್ತೇವೆ. ಕನಕಪುರದಲ್ಲಿನ ನಮ್ಮ ಕೆಲಸವನ್ನು ಮುಗಿಸಿಕೊಂಡು ಸುಮಾರು ಮಧ್ಯಾಹ್ನ 1-00 ಗಂಟೆಗೆ ಕನಕಪುರದಿಂದ ಕಬ್ಬಾಳು ಗ್ರಾಮಕ್ಕೆ ಮಧ್ಯಾಹ್ನ 2-00 ಗಂಟೆಗೆ ಹೋಗಿರುತ್ತೇವೆ. ನಾವು ಕಬ್ಬಾಳು ಗ್ರಾಮಕ್ಕೆ ಸಾತನೂರು ಗ್ರಾಮದ ಮೂಲಕ ಹೋಗಿರುತ್ತೇವೆ. ನಾನು ಮಧ್ಯಾಹ್ನ 2-00 ಗಂಟೆಗೆ ಕಬ್ಬಾಳು ಗ್ರಾಮದಲ್ಲಿರುವಾಗ ಪೊಲೀಸರು ಫೋನ್ ಮಾಡಿ ನಾವು ತಿಳಿಸಿದ ನಂತರ ಬರುವಂತೆ ತಿಳಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-9 ಮತ್ತು 11ರವರು ಇದ್ದರು ಎಂದರೆ ಸರಿ. ಪೊಲೀಸರು ನೀಡಿದ ಸ್ಥಳದ ಮಾಹಿತಿಯಂತೆ ನಾನು, ಚಾಸಾ-9 ಮತ್ತು 11ರವರು ಹೋಗಿರುತ್ತೇವೆ ಎಂದರೆ ಸರಿ. ನಾವು ಪೊಲೀಸರು ತಿಳಿಸಿದ ಸ್ಥಳಕ್ಕೆ ಹೋದಾಗ ಸಂಜೆ 4-00 ಗಂಟೆ ಆಗಿತ್ತು. ನಾನು ಪೊಲೀಸರು ತಿಳಿಸಿದ ಸ್ಥಳಕ್ಕೆ ಹೋದಾಗ ಅಲ್ಲಿ ಆರೋಪಿತರು ಇರುವುದನ್ನು ನೋಡಿ ಗಮನಿಸಿರುತ್ತೇನೆ. ಆ ಸಮಯದಲ್ಲಿ 5 ರಿಂದ 6 ಜನ ಸಾರ್ವಜನಿಕರು ಇದ್ದರು. ಪೊಲೀಸರು ತೋರಿಸಿದ ಮನೆಯ ಎಷ್ಟು ದೂರದಲ್ಲಿ ವಾಸದ ಮನೆಗಳು ಇದ್ದವು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಈ ಬಗ್ಗೆ ಗಮನಿಸಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-4ನ್ನು ಜರುಗಿಸಿದ ಸ್ಥಳದ ಚೆಕ್ಕು ಬಂಧಿಯನ್ನು ಈಗ ನನಗೆ ಹೇಳಲು ಆಗುವುದಿಲ್ಲ. ನಿಪಿ-4ನ್ನು ಜರುಗಿಸಲು ಮಾಹಿತಿಯನ್ನು ನಾನು ನೀಡಿರುವುದಿಲ್ಲ ಎಂದರೆ ಸರಿ. ಪೊಲೀಸರು ಪಂಚರಿಗೆ ಬರಲು ಲೇಖಿ ನೋಟೀಸ್ ನೀಡಿರುತ್ತಾರೆ. ಆದರೆ ಅದರ ಪ್ರತಿ ಈಗ ನನ್ನ ಬಳಿ ಇರುವುದಿಲ್ಲ. ನಂತರ ಪೊಲೀಸರು ಮಹಜರ್ ಜರುಗಿಸಲು ಇನ್ನೊಂದು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಅದು ಎಷ್ಟು ದೂರವಿತ್ತು ಎಂದು ಹೇಳಲು ನನಗೆ ನೆನಪಿಲ್ಲ. ಪೊಲೀಸರು ಒಂದು ಸೇತುವೆ ಬಳಿ ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಒಬ್ಬ ಆರೋಪಿಯು ಎಂಒ-5 ರಿಂದ 7ನ್ನು ಪೊಲೀಸರ ಸಮಕ್ಷಮ ಹಾಜರುಪಡಿಸಿರುತ್ತಾನೆ. ಪೊಲೀಸರು ಎಂಒ-5 ರಿಂದ 7ನ್ನು ಹ್ಯಾಂಡ್ ಗ್ಲೌಸ್ ಮೂಲಕ ತೆಗೆಸಿ, ನಂತರ ಮಹಜರ್ ಜರುಗಿಸಿ ಅಮಾನತುಪಡಿಸಿಕೊಂಡಿರುತ್ತಾರೆ. ನಂತರ ಎಂಒ-5 ರಿಂದ 7ನ್ನು ಪ್ರತ್ಯೇಕ ಪ್ರತ್ಯೇಕವಾಗಿ ಮೊಹರು ಮಾಡಿ

ಅಮಾನತುಪಡಿಸಿಕೊಂಡಿರುತ್ತಾರೆ. ಆದರೆ ಮೊಹರು ಮಾಡಿದ ಅಕ್ಷರ ನನಗೆ ನೆನಪಿರುವುದಿಲ್ಲ. ಎಂಒ-5 ರಿಂದ 7 ವಸ್ತುಗಳು ಮಣ್ಣಿನ ಮೇಲೆ ಬಿದ್ದಿರುವುದನ್ನು ನೋಡಿ ಗಮನಿಸಿರುತ್ತೇನೆ. ಸೇತುವೆಯ ಉದ್ದ ಮತ್ತು ಅಗಲದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸೇತುವೆಯ ಚೆಕ್ಕುಬಂಧಿಯನ್ನು ಈಗ ನನಗೆ ಹೇಳಲು ಆಗುವುದಿಲ್ಲ. ಅದರ ಬಗ್ಗೆ ಪೊಲೀಸರು ಬರೆದುಕೊಂಡ ಬರವಣಿಗೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಸಾಮಾನ್ಯವಾಗಿ ಬೇರೆ ಪ್ರಕರಣಗಳಲ್ಲಿಯೂ ಸಹ ಪಂಚರಾಗಿ ಹೋಗುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ಮತ್ತು 5ಕ್ಕೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಸೂಚನೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಎಂಒ-5 ರಿಂದ 7 ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-4 ಮತ್ತು 5ರಂತೆ ಪಂಚನಾಮೆ ಜರುಗಿಸುವ ಕಾಲದಲ್ಲಿ ಆರೋಪಿತರು ಇರುವುದನ್ನು ನೋಡಿ ಗಮನಿಸಿರುವುದಿಲ್ಲ ಎಂದರೆ ಸರಿಯಲ್ಲ. ಎಂಒ-5 ರಿಂದ 7 ವಸ್ತುಗಳನ್ನು 4ನೇ ಆರೋಪಿಯು ಪೊಲೀಸರ ಸಮಕ್ಷಮ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಸೂಚನೆ ಮೇರೆಗೆ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂಒ-5 ರಿಂದ 7 ವಸ್ತುಗಳನ್ನು ಈ ಕೇಸಿಗೋಸ್ಕರ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.

2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**<u>ಎಸ್.ಸಿ.5027/2022</u>**

ದಿಃ19.03.2025
ಚಾಸಾ-11 ಪ್ರಾಸಾ-9

| | |
|---|---|
| ಹೆಸರು | : ಸುರೇಶ್ |
| ತಂದೆಯ ಹೆಸರು | : ಕರಿಯಯ್ಯ |
| ವಯಸ್ಸು | : 43 |
| ಉದ್ಯೋಗ | : ಗಾರೆ ಮೇಸ್ತ್ರಿ |
| ವಾಸ | : ನಲ್ಲಹಳ್ಳಿ ದೊಡ್ಡಿ |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

ಸಾಕ್ಷಿಯು ದಿಃ26.05.2020ರ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-4ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

ದಿಃ26.05.2020ರಂದು ಕಾಳೀರೇಗೌಡನದೊಡ್ಡಿ ಗ್ರಾಮದ ಬಳಿ ಮಂಜುಳಮ್ಮ ಎಂಬುವವರ ಮನೆ ಬಳಿ ಪೊಲೀಸರ ಸೂಚನೆ ಮೇರೆಗೆ ನಿಪಿ-4ಕ್ಕೆ ಸಹಿ ಮಾಡಿರುತ್ತೇನೆ. ಮಂಜುಳರವರ ಮೇಲೆ ನಡೆದ ಗಲಾಟೆಯ ಸಂಬಂಧ ಪೊಲೀಸರು ಮಹಜರನ್ನು ಜರುಗಿಸಿರುತ್ತಾರೆ. ನಾನು ನಿಪಿ-4ರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸುಮಾರು 4-00 ರಿಂದ 5-00 ಗಂಟೆ ಸಮಯದಲ್ಲಿ ಪೊಲೀಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಿಪಿ-4ಕ್ಕೆ ನನ್ನ ಜೊತೆ ಚಾಸಾ-9 ಮತ್ತು 10ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ದಿಃ26.05.2020ರ ಜಪ್ತು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

ದಿಃ26.05.2020ರಂದು ಕಾಳೀರೇಗೌಡನದೊಡ್ಡಿ ಗ್ರಾಮದ ಮಂಜುಳಮ್ಮರವರ ಮನೆಯ ಮುಂಭಾಗದಲ್ಲಿ ಪೊಲೀಸರ ಸೂಚನೆ ಮೇರೆಗೆ ನಿಪಿ-5ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರು ಮಂಜುಳಮ್ಮರವರ ಮನೆಯ ಮುಂಭಾಗದ ಚರಂಡಿಯಿಂದ ಒಂದು ಚಾಕು, ಕಬ್ಬಿಣದ ರಾಡು ಮತ್ತು ಕಲ್ಲನ್ನು ಅಮಾನತುಪಡಿಸಿಕೊಂಡಿರುತ್ತಾರೆ. ನಿಪಿ-4ನ್ನು ಸಂಜೆ 5-00 ರಿಂದ 6-00 ಗಂಟೆ ಸಮಯದಲ್ಲಿ ಜರುಗಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-9 ಮತ್ತು 10ರವರ ಹಾಜರಿದ್ದರು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಸ್ಟೀಲ್ ಚಾಕು, ಒಂದು ಕಬ್ಬಿಣದ ರಾಡು ಹಾಗೂ ಒಂದು ಕಲ್ಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-5 ರಿಂದ 7 ಎಂದು ಗುರುತಿಸಲಾಗಿರುತ್ತದೆ. ಎಂಒ-5 ರಿಂದ 7ನ್ನು ಪೊಲೀಸರಿಗೆ ಯಾರು ಹಾಜರುಪಡಿಸಿದರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನಾನು ನಿಪಿ-4ಕ್ಕೆ ಚಾಸಾ-1ರವರ ಮನೆಯ ಬಳಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪೊಲೀಸರು ಆರೋಪಿತರು ನೀಡಿದ ಮಾಹಿತಿ ಮೇರೆಗೆ ನಿಪಿ-4ರಂತೆ ಮಹಜರ್ ಜರುಗಿಸಿರುತ್ತಾರೆ ಎಂದರೆ ಸರಿ. ನಾನು ನಿಪಿ-5ಕ್ಕೆ ಕಾಳೀರೇಗೌಡನದೊಡ್ಡಿ ಗ್ರಾಮದ ಚಿಕ್ಕಸೇತುವೆ ಬಳಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ 4ನೇ ಆರೋಪಿ ಹಾಜರುಪಡಿಸಿದ ಎಂಒ-5 ರಿಂದ 7ನ್ನು ಪೊಲೀಸರು ನಿಪಿ-5 ಮಹಜರ್ ಮೂಲಕ ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎಂ.ಎಂ, ಆರೋಪಿತರ ಪರ ವಕೀಲರಿಂದ**

ಸಾಮಾನ್ಯವಾಗಿ ನನ್ನ ಗಾರೆ ಕೆಲಸ ಬೆಳಗ್ಗೆ 7-30 ರಿಂದ ಸಂಜೆ 6-30 ರಿಂದ 7-00 ಗಂಟೆಯವರೆಗೂ ಇರುತ್ತದೆ. ನಾನು ಸಾಮಾನ್ಯವಾಗಿ ಒಂದು ಕಟ್ಟಡದ ಕೆಲಸವನ್ನು ವಹಿಸಿಕೊಂಡ ನಂತರ ಸದರಿ ಕೆಲಸ ಮುಗಿಯುವವರೆಗೂ ಬೇರೆ ಗಾರೆ ಕೆಲಸವನ್ನು ವಹಿಸಿಕೊಳ್ಳುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಕಟ್ಟಡದ

ಕೆಲಸ ಆರು ತಿಂಗಳುಗಳಿಂದ ಒಂದು ವರ್ಷಗಳ ಕಾಲ ಇರುತ್ತದೆ ಎಂದರೆ ಸರಿ. ಚಾಸಾ-9ರವರು ನನ್ನ ಪರಿಚಯಸ್ಥರು. ಸದರಿಯವರು ನೀರು ಗಂಟಿ ಕೆಲಸ ಮಾಡುತ್ತಾರೆ. ಚಾಸಾ-10ರವರು ಕಂಟ್ರ್ಯಾಕ್ಟರ್ ಕೆಲಸ ಮಾಡುತ್ತಾರೆ. ನಲ್ಲಹಳ್ಳಿ ದೊಡ್ಡಿಯಿಂದ ಪಟೇಲ್ ಕಾಳೀರೇಗೌಡನದೊಡ್ಡಿ ಗ್ರಾಮಕ್ಕೆ 16 ರಿಂದ 36 ಕಿಲೋ ಮೀಟರ್ ದೂರವಾಗುತ್ತದೆ.

ದಿಃ26.05.2020ರಂದು ನನಗೆ ಪಟೇಲ್ ಕಾಳೀರೇಗೌಡನದೊಡ್ಡಿ ಗ್ರಾಮದಲ್ಲಿ ಯಾವುದೇ ಕೆಲಸ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು, ಚಾಸಾ-9 ಮತ್ತು 10ರವರು ಕಾರಿನ ಮೂಲಕ ಕನಕಪುರದಿಂದ ಕಬ್ಬಾಳು ಗ್ರಾಮಕ್ಕೆ ಹೋಗುವ ಮಾರ್ಗ ಮಧ್ಯೆಯಲ್ಲಿ ಜನರ ಗುಂಪು ಇರುವುದನ್ನು ನೋಡಲು ಹೋದಾಗ ಪೊಲೀಸರ ಸೂಚನೆ ಮೇರೆಗೆ ಮಹಜರಿಗೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಸುಮಾರು 15 ರಿಂದ 20 ಜನರು ಹಾಜರಿದ್ದರು. ನಿಪಿ-4 ಮತ್ತು 5ನ್ನು ಜರುಗಿಸಲು ಪೊಲೀಸರಿಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಮಹಜರಿಗೆ ಮಂಜುಳಮ್ಮರವರ ಮನೆ ಬಳಿ ಸಹಿ ಮಾಡಿದ್ದು, ಸದರಿ ಮನೆಯ ಕಟ್ಟಡದ ಮಾಹಿತಿ ಹಾಗೂ ಚೆಕ್ಕು ಬಂಧಿಯ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ಪೊಲೀಸರಿಗೆ ನಿಪಿ-4ರಂತೆ ಮಹಜರ್ ಜರುಗಿಸಲು ಯಾರು ಮಾಹಿತಿ ನೀಡಿದರು ಎಂಬುದರ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ನಿಪಿ-5ರಂತೆ ಅಮಾನತುಪಡಿಸಿಕೊಂಡ ಎಂಒ-5 ರಿಂದ 7ನ್ನು ಯಾರು ತೋರಿಸಿದರು ಎಂಬ ಪ್ರಶ್ನೆಗೆ ಸಾಕ್ಷಿಯು ಒಬ್ಬ ಹುಡುಗನು ಮಾಹಿತಿಯನ್ನು ನೀಡಿರುತ್ತಾನೆ ಎಂದು ಸಾಕ್ಷಿ ನುಡಿಯುತ್ತಾರೆ. ಆತನ ಹೆಸರು ನನಗೆ ತಿಳಿದಿರುವುದಿಲ್ಲ ಎಂದೆರ ಸರಿ. ನಿಪಿ-5ರಂತೆ ಅಮಾನತುಪಡಿಸಿಕೊಂಡ ಎಂಒ-5 ರಿಂದ 7 ವಸ್ತುಗಳು ಮನೆಯಿಂದ ಎಷ್ಟು ದೂರದಲ್ಲಿ ಬಿದ್ದಿದ್ದವು ಎಂದು ಹೇಳಲು ಆಗುವುದಿಲ್ಲ. ಎಂಒ-5 ರಿಂದ 7 ವಸ್ತುಗಳು ಚರಂಡಿಯಲ್ಲಿ ಬಿದ್ದಿದ್ದವು. ಅವುಗಳು ಹುಲ್ಲಿನ ಪಸರೆ ಮೇಲೆ ಬಿದ್ದಿದ್ದವೋ ಇಲ್ಲವೋ ಎಂಬುದರ ಬಗ್ಗೆ ನನಗೆ ಈಗ ಹೇಳಲು ಆಗುವುದಿಲ್ಲ. ಎಂಒ-5 ರಿಂದ 7 ವಸ್ತುಗಳ ಮೇಲೆ ರಕ್ತದ ಕಲೆ ಇರುವುದನ್ನು ನೋಡಿ ಗಮನಿಸಿರುತ್ತೇನೆ. ಆದರೆ ಅದರ ವಿಸ್ತೀರ್ಣವನ್ನು ಹೇಳಲು ನನಗೆ ಆಗುವುದಿಲ್ಲ. ಎಂಒ-5 ರಿಂದ 7 ವಸ್ತುಗಳ ಮೇಲೆ ಕಂಡುಬರುವ ರಕ್ತದ ಕಲೆಯ ವಿಸ್ತೀರ್ಣವನ್ನು ನಿಪಿ-5ರಲ್ಲಿ ನಮೂದು ಮಾಡಿರುವ ಬಗ್ಗೆ ನನಗೆ

ತಿಳಿದಿರುವುದಿಲ್ಲ. ಸಾಕ್ಷಿಗೆ ಎಂಒ-6ನ್ನು ತೋರಿಸಿದಾಗ ಅದರ ಮೇಲ್ಭಾಗದ ತುದಿಯಲ್ಲಿ ರಕ್ತದ ಕಲೆ ಇರುತ್ತದೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಎಂಒ-5ನ್ನು ತೋರಿಸಿದಾಗ ಅದರ ಮೇಲೆ ರಕ್ತದ ಕಲೆ ಇರುವುದಿಲ್ಲವೆಂದು ನುಡಿದಿರುತ್ತಾರೆ. ಸಾಕ್ಷಿಗೆ ಎಂಒ-7ನ್ನು ತೋರಿಸಿದಾಗ ಅದರ ಮೇಲೆ ರಕ್ತದ ಕಲೆ ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಚರಂಡಿಯ ಉದ್ದ ಹಾಗೂ ಅಗಲದ ಬಗ್ಗೆ ತಿಳಿದಿರುವುದಿಲ್ಲ. ನನಗೆ ಕಬ್ಬಾಳು ಗ್ರಾಮಕ್ಕೆ ಹೋದ ಕಾರ್ ನಂಬರನ್ನು ಹೇಳಲು ಈಗ ನೆನಪಿರುವುದಿಲ್ಲ. ಪೊಲೀಸರು ಎಂಒ-5 ರಿಂದ 7ನ್ನು ನಿಪಿ-5ರಂತೆ ಮಹಜರ್ ಜರುಗಿಸಿ ಪ್ರತ್ಯೇಕ ಪ್ರತ್ಯೇಕವಾಗಿ ಅಮಾನತುಪಡಿಸಿಕೊಂಡಿರುತ್ತಾರೆ. ಪೊಲೀಸರು ಯಾವ ಅಕ್ಷರದಿಂದ ಸೀಲ್ ಮಾಡಿದರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರು ಪಂಚರಾಗಿ ಬರಲು ಲೇಖಿ ನೋಟೀಸ್ ನೀಡಿರುತ್ತಾರೆ. ಸದರಿ ನೋಟೀಸ್ ಪ್ರತಿ ಮನೆಯಲ್ಲಿರುತ್ತದೆ. ನನ್ನ ವೈಯಕ್ತಿಕ ಕೆಲಸದ ನಿಮಿತ್ತ ಸಾತನೂರು ಪೊಲೀಸ್ ಠಾಣೆಗೆ ಹೋದ ಸಮಯದಲ್ಲಿ ನಿಪಿ-4 ಮತ್ತು 5ಕ್ಕೆ ಪೊಲೀಸರ ಸೂಚನೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ನಿಪಿ-4 ಮತ್ತು 5ರಂತೆ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಎಂಒ-5 ರಿಂದ 7 ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.